# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/565/2018/ಎಆರ್‌ಇ-15

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:16/05/2022.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3)ರನ್ವಯ ವರದಿ

ವಿಷಯ: ಶ್ರೀ. ವಿ.ರಮೇಶ್, ಅಂದಿನ ಆಯುಕ್ತರು, ಟಿ.ಎಂ.ಸಿ. ಹೊಸಪೇಟೆ ಪಟ್ಟಣ, ಬಳ್ಳಾರಿ ಜಿಲ್ಲೆ (ಹಾಲಿ ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ ಗದಗ-ಬೆಟಗೇರಿ) ಇವರು ಸರ್ಕಾರಿ/ ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಕುರಿತು ವರದಿ.

*****

ದೂರುದಾರರಾದ ಶ್ರೀ.ಎಂ.ಎಸ್.ರಘು, ಮಾಜಿ ನಗರ ಸಭಾ ಸದಸ್ಯರು, ಹೊಸಪೇಟೆ, ಬಳ್ಳಾರಿ ಜಿಲ್ಲೆ ಇವರು ಶ್ರೀ.ವಿ.ರಮೇಶ್, ಅಂದಿನ ಆಯುಕ್ತರು, ಟಿ.ಎಂ.ಸಿ. ಹೊಸಪೇಟೆ ಪಟ್ಟಣ, ಬಳ್ಳಾರಿ ಜಿಲ್ಲೆ (ಹಾಲಿ ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ ಗದಗ-ಬೆಟಗೇರಿ) *(ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ)* ಇವರ ವಿರುದ್ಧ ದೂರನ್ನು ಸಲ್ಲಿಸಿರುತ್ತಾರೆ.

**2. ದೂರಿನ ಸಂಕ್ಷಿಪ್ತ ಸಾರಾಂಶ:**

ಸ್ವಚ್ಛ ಭಾರತ ಯೋಜನೆಯಡಿಯಲ್ಲಿ ಎದುರುದಾರರು 20 ಆಟೋ ಟಿಪ್ಪರ ವಾಹನಗಳನ್ನು ಮತ್ತು 2 ಸ್ವರಾಜ್ ಕಂಪನಿಯ ಟ್ರ್ಯಾಕ್ಟರ್‌ಗಳನ್ನು ವಾರ್ಷಿಕ ಮಹಾಸಭೆಯಲ್ಲಿ ಅನುಮತಿ ಪಡೆಯದೇ ಖರೀದಿಸಿರುತ್ತಾರೆ; ಕಾಮಗಾರಿಗಳನ್ನು ನಿರ್ವಹಿಸಲು ಗುತ್ತಿಗೆದಾರರಿಗೆ ನಡವಳಿಗಳು ಆಗದಿದ್ದರೂ ಸಹ ನಿಯಮಾವಳಿಗಳನ್ನು ಅನುಕರಣೆ ಮಾಡದೇ ಬಿಲ್ಲುಗಳನ್ನು ಅನುಮೋದನೆ ಮಾಡುವುದು ಹಾಗೂ ಪರವಾನಿಗೆ ಪತ್ರಗಳನ್ನು ನೀಡದೆ ಇಂದಿರಾ

ಕ್ಯಾಂಟೀನ್‌ಗಳನ್ನು ತೆರೆಯಲು ಅನುಮತಿ ನೀಡಿರುತ್ತಾರೆಂದು ದೂರುದಾರರು ದೂರನ್ನು ಸಲ್ಲಿಸಿರುತ್ತಾರೆ.

3. ದೂರಿಗೆ ಸಂಬಂಧಪಟ್ಟಂತೆ, ***ಪೋಲೀಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಹೊಸಪೇಟೆ ಇವರಿಂದ ತನಿಖಾ ವರದಿಯನ್ನು ಕೇಳಲಾಗಿ, ಸದರಿಯವರು ಹೆಚ್ಚುವರಿ ತನಿಖಾ ವರದಿ ದಿ.4.10.2021ಯಲ್ಲಿ ಈ ಕೆಳಕಂಡಂತೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ.***

i. 2016-17 ಮತ್ತು 2017-18ನೇ ಸಾಲಿನಲ್ಲಿ 14ನೇ ಹಣಕಾಸು ಯೋಜನೆಯಡಿ 16 ಆಟೋ ಟಿಪ್ಪರ್‌ಗಳನ್ನು ಜೆಮ್ ಪೋರ್ಟಲ್ ಮುಖಾಂತರ ಟಾಟಾ ಮೋಟರ್ಸ್ ಲಿಮಿಟೆಡ್, ಮುಂಬೈ ಮಹಾರಾಷ್ಟ್ರ ರಾಜ್ಯದವರಿಗೆ 16 ಟಿಪ್ಪರ್ ಪೂರೈಸಲು ಜೆಮ್ ಪೋರ್ಟಲ್‌ನಲ್ಲಿ ಸ್ಯಾಂಕ್ಷನ್ ಆರ್ಡರ್ ನೀಡಿದ್ದು ಇರುತ್ತದೆ. ಒಂದು ಆಟೋ ಟಿಪ್ಪರ್‌ಗೆ ರೂ.4,62,475/- ರಂತೆ ದರ ನಿಗದಿಪಡಿಸಿ ಒಟ್ಟು 16 ಆಟೋ ಟಿಪ್ಪರ್‌ಗಳಿಗೆ ಒಟ್ಟು ರೂ.79,83,280/- ಗಳನ್ನು ಟಾಟಾ ಮೋಟರ್ಸ್ ಲಿಮಿಟೆಡ್‌ರವರಿಗೆ ಖಜಾನೆ ಚೆಕ್ ಮೂಲಕ ನೀಡಿರುವುದು ದಾಖಲಾತಿಯಿಂದ ಧೃಡಪಟ್ಟಿರುತ್ತದೆ.

ii. 2016-17ನೇ ಮತ್ತು 2017-18ನೇ ಸಾಲಿನಲ್ಲಿ 14ನೇ ಹಣಕಾಸು ಯೋಜನೆಯ ಕ್ರಿಯಾ ಯೋಜನೆಯಲ್ಲಿ 08 ಬೊಲೆರೋ ವಾಹನ ಮತ್ತು 02 ಡಬಲ್ ಬಿನ್ ಆಟೋ ಟಿಪ್ಪರ್ ಖರೀದಿಸಲು ಮಾನ್ಯ ಜಿಲ್ಲಾಧಿಕಾರಿಗಳಿಂದ ಅನುಮೋದನೆ ಪಡೆದುಕೊಂಡಿರುತ್ತಾರೆ. ಆದರೆ 08 ಬೊಲೆರೋ ವಾಹನ ಮತ್ತು 02 ಡಬಲ್ ಬಿನ್ ಆಟೋ ಟಿಪ್ಪರ್ ಖರೀದಿಸುವ ಬದಲಾಗಿ 16 ಆಟೋ ಟಿಪ್ಪರ್‌ಗಳನ್ನು ಖರೀದಿಸಿ ಸರ್ಕಾರದ

ನಿಯಮ/ಮಾರ್ಗಸೂಚಿಗಳನ್ನು ಉಲ್ಲಂಘಿಸಿರುವುದು ದಾಖಲಾತಿಗಳಿಂದ ಧೃಡಪಟ್ಟಿರುತ್ತದೆ.

iii. 2016-17 ಮತ್ತು 2017-18 ನೇ ಸಾಲಿನಲ್ಲಿ 14ನೇ ಹಣಕಾಸು ಯೋಜನೆಯಡಿಲ್ಲ 16 ಆಟೋ ಟಿಪ್ಪರ್‌ಗಳನ್ನು ಇ-ಟೆಂಡರ್ ಮೂಲಕ ಖರೀದಿಸುವ ಬದಲು ಜೆಮ್ ಫೋರ್ಟಲ್ ಮುಖಾಂತರ ಖರೀದಿಸಿ ಕರ್ನಾಟಕ ನಾಗರೀಕ ಸಾರ್ವಜನಿಕ ಸಂಗ್ರಹಣಗಳಲ್ಲಿ ಪಾರದರ್ಶಕತೆ ಅಧಿನಿಯಮ ತಿದ್ದುಪಡಿ 2001ನ್ನು ಉಲ್ಲಂಘಿಸಿರುವುದು ದಾಖಲಾತಿಗಳಿಂದ ಧೃಡಪಟ್ಟಿರುತ್ತದೆ.

iv. 2016-17 ಮತ್ತು 2017-18ನೇ ಸಾಲಿನಲ್ಲಿ 14ನೇ ಹಣಕಾಸು ಯೋಜನೆಯಲ್ಲಿ 16 ಆಟೋ ಟಿಪ್ಪರ್‌ಗಳನ್ನು ಖರೀದಿಸಲು ಜೆಮ್ ಫೋರ್ಟಲ್ ದರಗಳಿಗೆ ನಗರಸಭೆಯ ಸಾಮಾನ್ಯ ಸಭೆಯಲ್ಲಿ ಠರಾವು ಮಂಡಿಸಿ ದರ ಮಂಜೂರಾತಿ ಪಡೆದುಕೊಂಡು ಗುತ್ತಿಗೆದಾರರಿಗೆ ಹಣ ಪಾವತಿಸುವುದು ನಿಯಮವಿದ್ದು ಆದರೆ 16 ಆಟೋ ಟಿಪ್ಪರ್ ಖರೀದಿಗೆ ಜೆಮ್ ಫೋರ್ಟಲ್ ದರಗಳಿಗೆ ನಗರಸಭೆಯ ಸಾಮಾನ್ಯ ಸಭೆಯ ಠರಾವಿನಲ್ಲಿ ದರ ಮಂಜೂರಾತಿ ಪಡೆಯದೇ ನೇರವಾಗಿ ಖರೀದಿಸಿ ಕರ್ನಾಟಕ ಪೌರನಿಯಮಗಳನ್ನು ಉಲ್ಲಂಘೀಸಿರುವುದು ದಾಖಲಾತಿಗಳ ಪರಿಶೀಲನೆಯಿಂದ ಮತ್ತು ಹೇಳಿಕೆಯಿಂದ ಧೃಡಪಟ್ಟಿರುತ್ತದೆ.

v. ಸರ್ಕಾರದ ಆದೇಶದ ಸಂ.ನಅಇ 184 ಎಂಎನ್‌ಇ 2015 ಬೆಂಗಳೂರು, ದಿ.11.11.2016 ರಂತೆ ರೂ.15 ಲಕ್ಷಕ್ಕಿಂತ ಹೆಚ್ಚಿಗೆ ಖರೀದಿ ಮಾಡಲು ನಗರಸಭೆಯ ಸಾಮಾನ್ಯ ಸಭೆಯಲ್ಲಿ ವಿಷಯ ಮಂಡಿಸಬೇಕು ಆದರೆ ಸದರಿ ಅವಧಿಯಲ್ಲಿನ ಪೌರಾಯುಕ್ತರು ನಗರಸಭೆಯ ಸಾಮಾನ್ಯ ಸಭೆಯಲ್ಲಿ

ವಿಷಯ ಮಂಡಿಸದೇ ರೂ.79,83,280/- ಕ್ಕಿಂತ ಹೆಚ್ಚು ಮೊತ್ತಕ್ಕೆ ವಾಹನಗಳನ್ನು ಖರೀದಿ ಮಾಡಿ ಸರ್ಕಾರದ ನಿಯಮಗಳನ್ನು ಉಲ್ಲಂಘಿಸಿರುವುದು ದಾಖಲಾತಿಯಿಂದ ಧೃಡಪಟ್ಟಿರುತ್ತದೆ ಎಂದು.

vi. 2016-17 ಮತ್ತು 2017-18ನೇ ಸಾಲಿನಲ್ಲಿ ಎದುರುದಾರರು ಹೊಸಪೇಟೆ ನಗರ ಸಭೆ ಪೌರಾಯುಕ್ತರಾಗಿ ಕೆಲಸ ಮಾಡುವ ಅವಧಿಯಲ್ಲಿ 14ನೇ ಹಣಕಾಸು ಯೋಜನೆಯಡಿಯಲ್ಲಿ 16 ಆಟೋ ಟಿಪ್ಪರಗಳನ್ನು ಖರೀದಿಸುವ ಪ್ರಕ್ರಿಯೆಯಲ್ಲಿ, ಕ್ರಿಯಾ ಯೋಜನೆಯಲ್ಲಿರುವ ವಾಹನಗಳ ಬದಲಾಗಿ ಸರ್ಕಾರದ ನಿಯಮ ಮತ್ತು ಮಾರ್ಗಸೂಚಿ ಮೀರಿ ಬೇರೆ ವಾಹನ ಖರೀದಿಸಿರುವುದು ಧೃಡಪಟ್ಟಿರುವುದಾಗಿ ಮತ್ತು ಕರ್ನಾಟಕ ನಾಗರೀಕ ಸಾರ್ವಜನಿಕ ಸಂಗ್ರಹಣಗಳಲ್ಲಿ ಪಾರದರ್ಶಕತೆ ಅಧಿನಿಯಮ 2001 ಉಲ್ಲಂಘಿಸಿರುವುದು ಧೃಡಪಟ್ಟಿರುತ್ತದೆ.

4. ಸದರಿ ತನಿಖಾ ವರದಿಯನ್ನು ಎದುರುದಾರರಿಗೆ ಕಳುಹಿಸಕೊಟ್ಟು ಅವರ ಅಭಿಪ್ರಾಯ/ಆಕ್ಷೇಪಣೆ ಸಲ್ಲಿಸುವಂತೆ ಸೂಚಿಸಿದ್ದು, ದಿ.12.4.2021 ರಂದು ತನಿಖಾ ವರದಿ ಮೇಲೆ ಆಕ್ಷೇಪಣೆಗಳನ್ನು ಎದುರುದಾರರು ಸಲ್ಲಿಸಿರುತ್ತಾರೆ. ಅವರ ವಿರುದ್ಧ ಸಲ್ಲಿಸಿರುವ ತನಿಖಾ ವರದಿಯು ಅಪೂರ್ಣವಾಗಿರುತ್ತದೆ, ಸಾಮಗ್ರಿಗಳನ್ನು ಸರ್ಕಾರದ ಮಂಜೂರಾತಿ ಮೇರೆಗೆ ನಿಯಮಾನುಸಾರ ಖರೀದಿಸಲು ಕ್ರಮ ವಹಿಸಲಾಗಿದ್ದು ಯಾವುದೇ ಹಣ ದುರುಪಯೋಗ ಇರುವುದಿಲ್ಲ ಎಂದು ತಿಳಿಸಿದ್ದಲ್ಲದೆ ಸರ್ಕಾರಕ್ಕೆ ರೂ.25,000/- ದಷ್ಟು ಉಳಿತಾಯ ಮಾಡಲಾಗಿದೆ ಎಂದು ತಿಳಿಸಿರುತ್ತಾರೆ.

5. ಎದುರುದಾರರು ನೀಡಿರುವ ಸಮಜಾಯಿಷಿಯು ತನಿಖಾಧಿಕಾರಿಯವರು ನೀಡಿರುವ ವರದಿಗೆ ವಿರುದ್ಧವಾಗಿರುತ್ತದೆ. ಇವರ ಸಮಜಾಯಿಸಿಯನ್ನು ಒಪ್ಪಿಕೊಂಡು ತನಿಖಾಧಿಕಾರಿಯವರ ತನಿಖಾ ವರದಿಯನ್ನು ತಿರಸ್ಕರಿಸಲು ಯಾವುದೇ

ಸಕಾರಣಗಳು ಕಂಡುಬರುವುದಿಲ್ಲ. ದಿ.4.10.2021 ರಂದು ಪೋಲೀಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಹೊಸಪೇಟೆ ಇವರ ತನಿಖಾ ವರದಿಯಲ್ಲಿ ಎದುರುದಾರರು ಕರ್ತವ್ಯಲೋಪವೆಸಗಿರುವುದು ಕಂಡು ಬರುತ್ತದೆ ಎಂದು ಸ್ಪಷ್ಟ ವಿವರಗಳನ್ನು ನೀಡಿರುವುದರಿಂದ, ದೂರಿನಲ್ಲಿ ಮಾಡಿರುವ ಆಪಾದನೆಗಳನ್ನು ಕೈಬಿಡಲು ಸಾಧ್ಯವಿಲ್ಲ.

6. ಆದ್ದರಿಂದ, ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966ರ ನಿಯಮಗಳು 3(1) (i) ರಿಂದ (iii) ರನ್ವಯ ಎದುರುದಾರರು ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ, ಇವರ ವಿರುದ್ಧ ಶಿಸ್ತು ನಡವಳಿಕೆ ಕ್ರಮ ಜರುಗಿಸಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ಅಡಿ ಇಲಾಖಾ ವಿಚಾರಣೆಗೆ ಅನುಮತಿಯನ್ನು ನೀಡಿ ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

7. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ಈ ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ ಮೂರು ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ವರದಿ ಮಾಡಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿದೆ.

K.N. Phanindra 17/05/22

**[ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ]**
**ಉಪಲೋಕಾಯುಕ್ತ-2 ರವರು,**
**ಕರ್ನಾಟಕ ರಾಜ್ಯ, ಬೆಂಗಳೂರು.**